ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವತಂತ್ರವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ

	ಶೀರ್ಷಿಕೆ			ಪು.ಸಂಖ್ಯೆ
	ಪೀಠಿಕೆ			2–4
1 – 3	ಅರಿವು	:	ನಮ್ಮ ಆಟದ ಮೈದಾನ ಸುರಕ್ಷಿತವೆ?	5
1 – 3	ಅನುಭವ	:	ಸುರಕ್ಷತೆ ಅಥವಾ ಅಸುರಕ್ಷತೆ	6–7
1 – 3	ಅವಲೋಕನ	:	ನಿಯಮಗಳನ್ನು ಅನುಸರಿಸಿ ಮತ್ತು ಸುರಕ್ಷಿತವಾಗಿರಿ	7–8
4 – 5	ಅರಿವು	:	ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ಬಗ್ಗೆ ಪರಿಚಯ	8–9
4 – 5	ಅನುಭವ	:	ನಮ್ಮ ಶಾಲೆ ಸುರಕ್ಷಿತವೇ?	9–10
4 – 5	ಅವಲೋಕನ	:	ಕಥೆಯನ್ನು ರಚಿಸಿ ಮತ್ತು ಅಭಿನಯ ಮಾಡಿ	11–12
6 – 8	ಅರಿವು	:	ರಕ್ಷಣೆ ಎಂದರೇನು?	12–13
6 – 8	ಅನುಭವ	:	ನಾವು ಏನು ಮಾಡಬೇಕು?	14
6 – 8	ಅವಲೋಕನ	:	ಸುರಕ್ಷತೆಯ ಜಾಗೃತಿ ಹರಡಿ	15
	ಪ್ರತಿಜ್ಞೆ			16
	ಸಲಹಾತ್ಮಕ ಚಟುವಟಿಕೆಗಳು			16

ಪೀಠಿಕೆ :

ಇಂದಿನ ಸಮಯದಲ್ಲಿ ವೈಯಕ್ತಿಕ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು ಒಂದು ಪ್ರಮುಖ ಕೌಶಲ್ಯವಾಗಿದೆ. ಅದರಲ್ಲೂ ಇಂದಿನ ಮಕ್ಕಳಿಗೆ ತಮ್ಮ ವೈಯಕ್ತಿಕ ಸುರಕ್ಷತೆ ಹೇಗೆ ಮಾಡಿಕೊಳ್ಳಬೇಕೆಂಬ ಮೂಲ ಅಂಶಗಳನ್ನು ತಿಳಿಸುವುದು ಮುಖ್ಯವಾಗಿದೆ. ಏಕೆಂದರೆ ಮಕ್ಕಳು ಯಾವಾಗಲೂ ಹಿರಿಯರ ನೆರಳಿನಲ್ಲಿ ಇರಲು ಸಾಧ್ಯವಾಗುವುದಿಲ್ಲ. ನಾವು ಸುರಕ್ಷತೆ ಬಗ್ಗೆ ಮಾತನಾಡುವಾಗ ಅದು ಕೇವಲ ದೈಹಿಕ ಹಿಂಸೆ ಮತ್ತು ಪೆಟ್ಟುಗಳಿಂದ ಮಾತ್ರ ರಕ್ಷಣೆ ಪಡೆಯುವುದಲ್ಲ, ಮಾನಸಿಕ ಭಾವನೆಗಳ ಸಂರಕ್ಷಣೆಯೂ ಆಗಿರುತ್ತದೆ. ಕೆಲವೊಮ್ಮೆ ಮಕ್ಕಳು ತಮ್ಮ ಮೇಲೆ ಆಗುತ್ತಿರುವ ಮಾನಸಿಕ ಆಘಾತ ಮತ್ತು ಹಿಂಸೆಗಳನ್ನು ಹಂಚಿಕೊಳ್ಳಲು ಅವಕಾಶಗಳಿಂದ ವಂಚಿತರಾಗಿರುತ್ತಾರೆ. ಆದ್ದರಿಂದ ಸುರಕ್ಷತೆಯನ್ನು ವಿಭಿನ್ನ ದೃಷ್ಟಿ ಕೋನದಲ್ಲಿ ನೋಡಲು ಹಾಗೂ ತಮ್ಮ ಸುರಕ್ಷತೆ ಬಗ್ಗೆ ಮಾತನಾಡಲು ಎಲ್ಲರಿಗೂ ಸಮಾನ ಅವಕಾಶ ನೀಡುವುದು ಮುಖ್ಯವಾಗಿದೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯೂಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಮಾಡ್ಯೂಲ್ ಅನ್ನು ಕೆಳಕಂಡಂತೆ ಮೂರು ಘಟಕಗಳಾಗಿ ವಿಂಗಡಿಸಲಾಗಿದೆ.

1) ಅರಿವು

2) ಅನುಭವ

3) ಅವಲೋಕನ/ಪ್ರತಿಫಲನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್ ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಸಂರಚಿಸಲಾಗಿದೆ. ಇದರಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ಕಾರ್ಯದಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಒಂದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂದು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವು ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸವಾದ ವಾತಾವರಣವಿರುವುದನ್ನು ಖಚಿತಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

ಹಿಂಸೆ ಮತ್ತು ಪೆಟ್ಟುಗಳಿಂದ ಸುರಕ್ಷತೆ ಮತ್ತು ರಕ್ಷಣೆ

ಹಲೋ ವಿಧ್ಯಾರ್ಥಿಗಳೇ, ನಿಮ್ಮಲ್ಲಿ ಯಾರಾದರೂ ಯಾವಾಗಲಾದರೂ ಪೆಟ್ಟು ತಿಂದಿದ್ದೀರಾ? ಚಿಕಿತ್ಸೆಗಾಗಿ ಎಷ್ಟು ಜನರು ವೈದ್ಯರನ್ನು ಭೇಟಿ ಮಾಡಿದ್ದೀರಾ? ನಾವು ಆಟ ಆಡುವಾಗ ನಾವು ಸುರಕ್ಷಿತವಾಗಿರದಿದ್ದರೆ ನಮಗೆ ಪೆಟ್ಟು ಬೀಳುತ್ತದೆ ಎಂದು ನಮಗೆಲ್ಲಾ ತಿಳಿದಿದೆ. ನಾವು ನಮ್ಮ ಸುತ್ತಮುತ್ತಲಿನ ವಸ್ತುಗಳಿಂದ ಹೇಗೆ ಸುರಕ್ಷಿತವಾಗಿರುವುದು? ಬನ್ನಿ ನಮಗೆ ಯಾವ ರೀತಿಯ ಸುರಕ್ಷತೆ ಬೇಕಾಗಿದೆ ಎಂಬುದನ್ನು ತಿಳಿಯೋಣ !

ಮನೆಯಲ್ಲಿ ಸುರಕ್ಷತೆ :

ರಾಘು ತನ್ನ ಮನೆಯಲ್ಲಿ ಕತ್ತರಿಯನ್ನು ಹಿಡಿದು ಆಟವಾಡುತ್ತಿದ್ದಾನೆ. ಅವನು ಇನ್ನೇನು ಅದರಲ್ಲಿ ಆಡಬೇಕು ಎಂದಾಗ ಅವನ ಕೈಯಿಂದ ಅದು ಜಾರುತ್ತದೆ. ಆಗ ಅವನ ಬೆರಳುಗಳಿಗೆ ಪೆಟ್ಟಾಗಿ ರಕ್ತ ಸುರಿಯಲಾರಂಭಿಸುತ್ತದೆ.

ನಿಮಗೆ ಗೊತ್ತೇ? ಮನೆಯಲ್ಲಿರುವ ಅಪಾಯಕಾರಿಯಾದ ಯಾವುದೇ ವಸ್ತುಗಳನ್ನು (ಉದಾ: ಚಾಕು, ಬ್ಲೇಡ್, ಈಳಿಗೆ ಮಣೆ, ಸೂಜಿ, ಕತ್ತರಿ, ಗಾಜು) ಪೋಷಕರು ಅಥವಾ ದೊಡ್ಡವರು ಇಲ್ಲದಿರುವಾಗ ಮುಟ್ಟಬಾರದೆಂದು!

ಬೆಂಕಿಯಿಂದ ಸುರಕ್ಷತೆ :

ಸಿದ್ಧಾರ್ಥನು ಒಂದು ದಿನ ಮನೆಯಲ್ಲಿ ತಾನೊಬ್ಬನೇ ಇರುವಾಗ ಹಸಿವು ಎನಿಸಿ ತಿಂಡಿ ಮಾಡಿಕೊಳ್ಳಲು ಗ್ಯಾಸ್ ಒಲೆ ಹಚ್ಚುತ್ತಾನೆ. ಒಲೆಯ ಮೇಲೆ ಪಾತ್ರೆಯನ್ನಿಟ್ಟು ತಿಂಡಿ ಮಾಡುವ ಸಂದರ್ಭದಲ್ಲಿ ಬಿಸಿಯಾದ ಪಾತ್ರೆಯನ್ನು ಮುಟ್ಟಿ ಕೈಯನ್ನು ಸುಟ್ಟುಕೊಳ್ಳುತ್ತಾನೆ. ಮಕ್ಕಳೇ, ನೀವೊಬ್ಬರೇ ಮನೆಯಲ್ಲಿ ಇರುವಾಗ ಗ್ಯಾಸ್ ಒಲೆ ಹಚ್ಚದಿರಿ. ಜಾಗರೂಕರಾಗಿರಿ.

ನೀರಿನಿಂದ ಸುರಕ್ಷತೆ :

ಒಂದು ದಿನ ಸೊಹೇಲ್ ತನ್ನ ಸ್ನೇಹಿತರೊಡನೆ ಕೊಳದಲ್ಲಿ ಆಡುತ್ತಿದ್ದನು. ಆಗ ಅವನ ಸ್ನೇಹಿತನೊಬ್ಬ ನೀನು ಎತ್ತರದಿಂದ ಜಿಗಿದು ನಿನ್ನ ಸಾಮರ್ಥ್ಯ ತೋರಿಸು ಎಂದು ಅವನನ್ನು ಕೆಣಕಿದನು. ಸೊಹೇಲ್ ಇದರಿಂದ ಉತ್ತೇಜನಗೊಂಡು ಎತ್ತರದ ಸ್ಥಳದಿಂದ ಕೊಳಕ್ಕೆ ಜಿಗಿದನು. ಅವನಿಗೆ ಕೊಳದ ಬದಿಯಲ್ಲಿ ಕಲ್ಲು ಇರುವುದು ಕಾಣಿಸಲಿಲ್ಲ. ಅವನು ಜಾರಿ ತನ್ನ ಕೈ ಮತ್ತು ಕಾಲುಗಳಿಗೆ ಪೆಟ್ಟು ಮಾಡಿಕೊಂಡನು. ಇದರಿಂದ ಅವನು ಮನೆಯಲ್ಲಿ ಎರಡು ತಿಂಗಳುಗಳ ಕಾಲ ವಿಶ್ರಾಂತಿ ಪಡೆಯುವಂತಾಯಿತು.

ದೊಡ್ಡವರು ಸುತ್ತ ಮುತ್ತ ಇಲ್ಲದಿರುವಾಗ ನಾವು ಕೊಳದಲ್ಲಿ, ಕೆರೆಯಲ್ಲಿ ಈಜಲು ಹೋಗಬಾರದೆಂದು ನಮಗೆ ತಿಳಿದಿರಬೇಕು.

ಅಪರಿಚಿತರಿಂದ ಸುರಕ್ಷತೆ :

ಸಾಮಾನ್ಯವಾಗಿ ನಮಗೆ ಜೀವನದಲ್ಲಿ ಆಪತ್ತುಗಳು ಅಪರಿಚಿತರಿಂದ ಹೆಚ್ಚಾಗಿ ಬರದಿದ್ದರೂ, ಅವರಿಂದ ಎದುರಾಗಬಹುದಾದ ಕೆಲವು ಆಪತ್ತುಗಳನ್ನು ಎದುರಿಸಲು ಈ ಕೆಳಗಿನ ನಿಯಮಗಳನ್ನು ಅಳವಡಿಸಿಕೊಳ್ಳಬೇಕು.



- ಅಪರಿಚಿತರೊಡನೆ ಮಾತನಾಡಬೇಡಿ; ಯಾರಾದರೂ ಅಪರಿಚಿತ ವ್ಯಕ್ತಿ ನಿಮ್ಮನ್ನು ಸಂಪರ್ಕಿಸಲು ಪ್ರಯತ್ನಿಸಿದರೆ ತಕ್ಷಣ ನೀವು ನಿಮಗೆ ಪರಿಚಿತರಿರುವ ವ್ಯಕ್ತಿಯ ಬಳಿಗೆ ಹೋಗಿರಿ.
- ಮನೆಯ ಬಾಗಿಲಿನ ಹತ್ತಿರ ಯಾರಾದರೂ ಅಪರಿಚಿತ ವ್ಯಕ್ತಿ ಬಂದರೆ ನೀವು ಅವರಿಗೆ ಉತ್ತರಿಸಲು ಹೋಗಬೇಡಿ, ಅದನ್ನು ನಿಮ್ಮ ಪೋಷಕರಿಗೆ ತಿಳಿಸಿ. ನಿಮಗೆ ಪರಿಚಯವಿರದವರ ವಾಹನಗಳನ್ನು ಒಬ್ಬರೇ ಹತ್ತಬೇಡಿ, ಯಾರಾದರೂ ಪರಿಚಯದವರು ಇದ್ದರೆ ಮಾತ್ರ ಹತ್ತಿ.

ಇಂದು ನಾವು ಕೆಲವು ಪ್ರಮುಖ ಸಂಗತಿಗಳನ್ನು ಉಲ್ಲಾಸಭರಿತ ಚಟುವಟಿಕೆಗಳ ಮೂಲಕ ಕಲಿಯೋಣ.

ನೀವು ಇಂದಿನ ಚಟುವಟಿಕೆಯನ್ನು ನಿರ್ವಹಿಸಿದ ನಂತರ ಕೆಳಕಂಡ ಅಂಶಗಳನ್ನು ತಿಳಿಯುವಿರಿ.

- ನಿಮ್ಮ ಸುರಕ್ಷತೆಯನ್ನು ನೀವು ಹೇಗೆ ಮಾಡಿಕೊಳ್ಳಬೇಕೆಂಬ ಕೌಶಲ್ಯವನ್ನು ಬೆಳೆಸಿಕೊಳ್ಳುವಿರಿ
- ಅಸುರಕ್ಷಿತ ವಾತಾವರಣ ಎದುರಾದಾಗ ಅದನ್ನು ವಿಶ್ಲೇಷಿಸಿ ಕೋಪ ಮತ್ತು ಭಯದ ಭಾವನೆಗಳನ್ನು ಹತೋಟಿಯಲ್ಲಿಡುವ ಕಲೆಯನ್ನು ಕರಗತ ಮಾಡಿಕೊಳ್ಳುವಿರಿ.

ಹಾಗಾಗಿ, ಬನ್ನಿ ಪ್ರಾರಂಭಿಸೋಣ !

ಅರಿವು/ತಿಳುವಳಿಕೆ :

ತರಗತಿ 1–3 : (60 ನಿಮಿಷಗಳು)

ನಮ್ಮ ಆಟದ ಮೈದಾನ ಸುರಕ್ಷಿತವೇ ?

ನಿಮ್ಮಲ್ಲಿ ಎಷ್ಟು ಜನ ಮೈದಾನದಲ್ಲಿ ಆಟ ಆಡುತ್ತೀರಾ?	ಮೈದಾನದಲ್ಲಿ ಆಡುವುದೆಂದರೆ ಬಹಳ ಉಲ್ಲಾಸಕರವಲ್ಲವೇ? ಏಕೆ?	ಮೈದಾನದಲ್ಲಿ ಆಡುವಾಗ ನೀವು ಎಷ್ಟು ಜನ ಪೆಟ್ಟು ಮಾಡಿಕೊಂಡಿದ್ದೀರಾ?	ಮೈದಾನದಲ್ಲಿ ನೀವು ಪೆಟ್ಟು ಮಾಡಿಕೊಂಡಾಗ ಏನು ಮಾಡಿದಿರಿ ?
ನೀವು ಮೈದಾನದಲ್ಲಿ ಆಡುವಾಗ ಬೇಸರವಾಗಿತ್ತೇ? ಹೌದು ಎಂದಾದರೆ ಅದು ಯಾವಾಗ ?	ಆಟದ ಮೈದಾನದಲ್ಲಿ ಹೇಗೆ ಪೆಟ್ಟು ಮಾಡಿಕೊಂಡಿರಿ?	ಮೈದಾನದಲ್ಲಿ ಆಡುವಾಗ ನೀವು ಯಾರಿಗಾದರೂ ಪೆಟ್ಟು ಮಾಡಿದ್ದೀರಾ? ನಿಮ್ಮ ಅನುಭವವನ್ನು ಹಂಚಿಕೊಳ್ಳಿ.	ಶಾಲೆಯ ಬೇರೆ ಯಾವ ಭಾಗಗಳಲ್ಲಿ ನೀವು ಪೆಟ್ಟು ಮಾಡಿಕೊಳ್ಳುವ ಸಾಧ್ಯತೆ ಇದೆ.

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ವಿದ್ಯಾರ್ಥಿಗಳನ್ನು 3–4 ಗುಂಪುಗಳಾಗಿ ವಿಂಗಡಿಸಿ ಮತ್ತು ಮಿಂಚುಪಟ್ಟಿಯಲ್ಲಿ ನೀಡಿರುವ ಪ್ರಶ್ನೆಗಳನ್ನು ಕೇಳಿರಿ.
- ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಅವಲಂಭಿಸಿ, ಕೆಳಕಂಡಂತೆ ನಿರ್ದಿಷ್ಟ ಪ್ರಶ್ನೆಗಳನ್ನು ಕೇಳುವುದರ ಮೂಲಕ ಚರ್ಚೆಯನ್ನು ಮುಂದುವರೆಸಿ.
  - ಮೈದಾನದಲ್ಲಿ ಆಡುವಾಗ ನೀವು ಯಾರಿಗಾದರೂ ಪೆಟ್ಟು ಮಾಡಿದ್ದೀರಾ?
  - ಶಾಲೆಯ ಬೇರೆ ಯಾವ ಭಾಗದಲ್ಲಿ ನೀವು ಪೆಟ್ಟು ಮಾಡಿಕೊಳ್ಳುವ ಸಾಧ್ಯತೆ ಇದೆ?
  - ನಿಮ್ಮ ಸುತ್ತಮುತ್ತನಲ್ಲಿರುವವರು ನಿಮಗೆ ಪೆಟ್ಟು ಮಾಡುವರೆ? ಯಾರು ನಿಮಗೆ ಪೆಟ್ಟು ಮಾಡಬಹುದು?
- ವಿದ್ಯಾರ್ಥಿಗಳಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಉತ್ತೇಜಿಸಿ.
- ಆಟದ ಮೈದಾನ, ತರಗತಿ ಮುಂತಾದ ಸ್ಥಳಗಳಲ್ಲಿ ನಾವು ಏಕೆ ನಿಯಮಗಳನ್ನು ರೂಪಿಸಿಕೊಳ್ಳಬೇಕು ಮತ್ತು ಅವುಗಳ ಪ್ರಾಮುಖ್ಯತೆಯನ್ನು ತಿಳಿಸುತ್ತಾ ಚರ್ಚೆಯನ್ನು ಸಾರಾಂಶೀಕರಿಸಿ. ವೈಯಕ್ತಿಕ ಅರಿವು ಮತ್ತು ಎಚ್ಚರಿಕೆಯ ಪ್ರಾಮುಖ್ಯತೆಯ ಬಗ್ಗೆ ಹೆಚ್ಚು ಒತ್ತು ಕೊಡಿ.

ಮಕ್ಕಳೇ, ಇಲ್ಲಿಯವರೆಗೆ ನಾವು ಸುರಕ್ಷತೆಯ ಅರ್ಥವನ್ನು ತಿಳಿದುಕೊಂಡೆವು ಸರಿಯೆ?
ಈಗ ಬನ್ನಿ ಸುರಕ್ಷತೆಯ ಅನುಭವವನ್ನು ಪಡೆಯೋಣ!

ಅನುಭವ :

ತರಗತಿ 1–3 : **(60 ನಿಮಿಷಗಳು)**

ಸುರಕ್ಷತೆ ಅಥವಾ ಅಸುರಕ್ಷತೆ

ಸುರಕ್ಷತೆ	ಅಸುರಕ್ಷತೆ
	

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಪ್ರತಿಯೊಬ್ಬ ವಿದ್ಯಾರ್ಥಿಗೆ ಮೇಲೆ ತೋರಿಸಿರುವ ಚಿತ್ರವಿರುವ ಹಾಳೆಯನ್ನು ನೀಡುವುದು.
- ಈ ಚಿತ್ರಗಳನ್ನು ಕತ್ತರಿಸಿ ಅವುಗಳಲ್ಲಿ ಅವರಿಗೆ ಯಾವುದು ಸುರಕ್ಷಿತ ಎನಿಸುತ್ತದೆಯೋ ಅದನ್ನು ಸುರಕ್ಷಿತ ಶೀರ್ಷಿಕೆ ಅಡಿ ಮತ್ತು ಯಾವುದು ಅಸುರಕ್ಷಿತ ಎನಿಸುತ್ತದೆಯೋ ಅದನ್ನು ಅಸುರಕ್ಷಿತ ಶೀರ್ಷಿಕೆ ಅಡಿ ಜೋಡಿಸಲು ತಿಳಿಸಿ.
- ಈ ಚಟುವಟಿಕೆ ಮಾಡಲು 15–20 ನಿಮಿಷಗಳ ಸಮಯ ನೀಡಿ.

- ವಿದ್ಯಾರ್ಥಿಗಳಿಗೆ ಅವರು ಮಾಡಿರುವ ಆಯ್ಕೆಗಳ ಬಗ್ಗೆ (ಚಿತ್ರಗಳನ್ನು ತೋರಿಸುತ್ತ) ಪ್ರಶ್ನೆಗಳನ್ನು ಕೇಳಿ.
- ಮಕ್ಕಳಿಗೆ, ಸುರಕ್ಷಿತ ಎನಿಸಿರುವುದು ಕೆಲವೊಮ್ಮೆ ಅಸುರಕ್ಷವೂ ಆಗಿರಬಹುದು. ಉದಾ: ಹೂ ಕೀಳುವಾಗ ಹೂವಿನ ಮೇಲೆ ಜೇನು ಕುಳಿತಿದ್ದರೆ ಕಚ್ಚಬಹುದು ಮತ್ತು ಮನೆಯಲ್ಲಿ ಧೂಳು ತುಂಬಿರುವ ಗೊಂಬೆಗಳನ್ನು ಮುಟ್ಟುವುದರಿಂದ ಖಾಯಿಲೆ ಬೀಳಬಹುದು.
- ತಮಗೆ ಪೆಟ್ಟುಗಳು ಮತ್ತು ಗಾಯಗಳು ಆಗಿರುವ ಬಗ್ಗೆ, ಹಾಗೂ ವೈದ್ಯರನ್ನು ಸಂಪರ್ಕಿಸಿದಾಗ ಆಗಿರುವ ಅನುಭವಗಳು ಇತ್ಯಾದಿಗಳನ್ನು ಹಂಚಿಕೊಳ್ಳಲು ತಿಳಿಸಿ. ಎಲ್ಲಾ ಸ್ಥಳಗಳಲ್ಲಿ ಸುರಕ್ಷಿತವಾಗಿರುವ ಅವಶ್ಯಕತೆಯ ಕುರಿತು ಮತ್ತು ಕುಟುಂಬದಲ್ಲಿನ ದೈಹಿಕ ಮತ್ತು ಮಾನಸಿಕ ನೋವುಗಳ ಬಗ್ಗೆ ಮಾತನಾಡಿ.

ಅವಲೋಕನ :

ತರಗತಿ 1–3 : **(60 ನಿಮಿಷಗಳು)**

ನಿಯಮಗಳನ್ನು ಅನುಸರಿಸಿ ಮತ್ತು ಸುರಕ್ಷಿತವಾಗಿರಿ

ಗಮ್ ಬೇಡ

ತರಗತಿ ವೇಳೆಯಲ್ಲಿ ತಿನ್ನುವುದು ಸಭ್ಯತೆಯಲ್ಲ

ತರಗತಿಯ ನಿಯಮಗಳ ಮಿಂಚುಪಟ್ಟಿಗಳು

ಸರದಿಗಾಗಿ ಕಾಯಿರಿ

‘ದಯಮಿಟ್ಟು’ ಮತ್ತು ‘ಧನ್ಯವಾದ’ ಹೇಳಿ

ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರ ಬಳಸಿ

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ.
- ಈ ಕೆಳಗಿನ ವಿಷಯಗಳನ್ನು ಗುಂಪಿನ ವಿದ್ಯಾರ್ಥಿಗಳಿಗೆ ನೀಡಿ.
  - ತರಗತಿಯಲ್ಲಿ ಅನುಸರಿಸಬೇಕಾದ ನಿಯಮಗಳು.
  - ಆಟದ ಮೈದಾನದಲ್ಲಿ ಅನುಸರಿಸಬೇಕಾದ ನಿಯಮಗಳು.
- ಈ ಮೇಲಿನ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ತಮ್ಮದೇ ಆದ ನಿಯಮ ರೂಪಿಸಿ ಪೋಸ್ಟರ್ ತಯಾರಿಸಲು ತಿಳಿಸಿ.
- ತಮ್ಮ ಸ್ವತಃ ಅನುಭವಗಳ ಬಗ್ಗೆ ಆಲೋಚಿಸಿ ನಿಯಮಗಳನ್ನು ರೂಪಿಸಲು ಪ್ರೋತ್ಸಾಹಿಸಿ.
- ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ತಯಾರಿಸಿದ ಎಲ್ಲಾ ಪೋಸ್ಟರ್‌ಗಳನ್ನು ನೋಡಲು ಸಾಧ್ಯವಾಗುವಂತೆ ತೂಗು ಹಾಕುವುದು ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು.

ಅರಿವು :

ತರಗತಿ 4–5 : (60 ನಿಮಿಷಗಳು)

ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ಬಗ್ಗೆ ಪರಿಚಯ

ಪ್ರಥಮ ಚಿಕಿತ್ಸಾ ಪೆಟ್ಟಿಗೆ ಎಂದರೇನು?

ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ನೀವು ನೋಡಿದ್ದೀರಾ?

ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ನೀವು ಎಂದಾದರೂ ಉಪಯೋಗಿಸಿದ್ದೀರಾ?

ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಏನೇನು ವಸ್ತುಗಳಿರುತ್ತವೆ? ಅವುಗಳ ಚಿತ್ರ ಬರೆಯಿರಿ.

ನೀವು ಯಾರಿಗಾದರೂ ಪ್ರಥಮ ಚಿಕಿತ್ಸೆ ನೀಡಿದ್ದೀರಾ? ಅಥವಾ ನೀವು ಪ್ರಥಮ ಚಿಕಿತ್ಸೆ ಪಡೆದಿದ್ದೀರಾ?

ನಿಮಗೆ ಅಥವಾ ನಿಮ್ಮ ಸುತ್ತಮುತ್ತಲಿನಲ್ಲಿರುವವರಿಗೆ ಪೆಟ್ಟು ಆದಾಗ ಏನು ಮಾಡಬೇಕು?

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಿಕ್ಷಕರ ಸಹಾಯದೊಂದಿಗೆ ವಿದ್ಯಾರ್ಥಿಗಳಿಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಬಗ್ಗೆ ವಿವರಿಸಿ ಹೇಳಿ. (ಯಾವುದಾದರು ವ್ಯಕ್ತಿಗೆ ಪೆಟ್ಟಾದಾಗ ಅವನಿಗೆ ಸೂಕ್ತ ಚಿಕಿತ್ಸೆ ಸಿಗುವುದಕ್ಕಿಂತ ಮುಂಚೆ ತುರ್ತಾಗಿ ಚಿಕಿತ್ಸೆ ನೀಡಲು ಅವಶ್ಯವಿರುವ ವಸ್ತುಗಳನ್ನು ಈ ಪೆಟ್ಟಿಗೆ ಹೊಂದಿರುತ್ತದೆ).
- ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿರುವ ವಸ್ತುಗಳ ಚಿತ್ರ ಬರೆಯಲು 10 ನಿಮಿಷ ಸಮಯ ನೀಡಿ.
- ವಿದ್ಯಾರ್ಥಿಗಳನ್ನು 5–6 ಗುಂಪುಗಳಾಗಿ ವಿಂಗಡಿಸಿ.
- ಪ್ರತಿಯೊಂದು ಗುಂಪಿಗೆ 15–20 ನಿಮಿಷ ಸಮಯ ನೀಡಿ, ಈ ಸಮಯದಲ್ಲಿ ಅವರು ಮಿಂಚುಪಟ್ಟಿಯಲ್ಲಿರುವ ಪ್ರಶ್ನೆಗಳ ಬಗ್ಗೆ ಹಾಗೂ ತಾವು ಬರೆದಿರುವ ಚಿತ್ರಗಳ ಬಗ್ಗೆ ಚರ್ಚಿಸಿ ಅದರ ಸಾರಾಂಶವನ್ನು ಇತರ ಗುಂಪುಗಳೊಂದಿಗೆ ಹಂಚಿಕೊಳ್ಳಲು ತಿಳಿಸಿ.

ಅನುಭವ :

ತರಗತಿ 4–5 : **(60 ನಿಮಿಷಗಳು)**

ನಮ್ಮ ಶಾಲೆ ಸುರಕ್ಷಿತವೇ ?



ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ.
- ವಿದ್ಯಾರ್ಥಿಗಳಿಗೆ ಆಟದ ಮೈದಾನ, ಶಾಲೆಯ ಕೊಠಡಿಗಳು, ಶೌಚಾಲಯಗಳು, ಶಾಲೆಯ ಮುಂಭಾಗ ಮತ್ತು ಇತರ ಜಾಗಗಳ ಚಿತ್ರಗಳನ್ನು ಬರೆಯಲು ಹೇಳಿ.
- ನಂತರ ಪ್ರತಿ ಗುಂಪಿನ ಹತ್ತಿರ ಹೋಗಿ ಅವರು ಬರೆದಿರುವ ಚಿತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳುವುದು.
  - ಯಾವ ಜಾಗದಲ್ಲಿ ಮಕ್ಕಳಿಗೆ ಪೆಟ್ಟು ಆಗಬಹುದು?
  - ಯಾವ ಜಾಗವು ಮಕ್ಕಳಿಗೆ ಅಪಾಯಕಾರಿಯಾಗಿದೆ?
- ವಿದ್ಯಾರ್ಥಿಗಳು ಗುರುತಿಸಿದ ಜಾಗದಲ್ಲಿ (X) ಚಿಹ್ನೆ ಹಾಕುವಂತೆ ಹೇಳಿ.
- ಈ ಚಟುವಟಿಕೆ ಮುಗಿದ ನಂತರ ಪ್ರತಿ ಗುಂಪಿಗೆ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ತಿಳಿಸಿ.
- ವಿದ್ಯಾರ್ಥಿಗಳು ತಾವು ನೀಡಿದ ಪ್ರತಿಕ್ರಿಯೆಗಳಿಗೆ ಕಾರಣಗಳನ್ನು ವಿವರವಾಗಿ ತಿಳಿಸುವಂತೆ ಉತ್ತೇಜಿಸಿ.
  - ಈ ಜಾಗದಲ್ಲಿ ಮಕ್ಕಳಿಗೆ ಪೆಟ್ಟು ಆಗಬಹುದೆಂದು ನಿಮಗೆ ಏಕೆ ಅನಿಸುತ್ತದೆ? ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ?
  - ಈ ಜಾಗವು ಮಕ್ಕಳಿಗೆ ಹೇಗೆ ಅಪಾಯಕಾರಿಯಾಗಿದೆ?
  - ಅದನ್ನು ಸುರಕ್ಷಿತ ಜಾಗ ಮಾಡಲು ಏನು ಮಾಡಬಹುದು?
  - ಮಕ್ಕಳನ್ನು ಸುರಕ್ಷಿತವಾಗಿಡಲು ಏನೇನು ನಿಯಮಗಳನ್ನು ರೂಪಿಸಬಹುದು?

ಎಂಬ ಪ್ರಶ್ನೆಗಳ ಮೂಲಕ ಚರ್ಚೆಯನ್ನು ಸಾರಾಂಶೀಕರಿಸಿ.

ಅವಲೋಕನ :

ತರಗತಿ 4–5 : **(60 ನಿಮಿಷಗಳು)**

ಕಥೆಯನ್ನು ರಚಿಸಿ ಮತ್ತು ಅಭಿನಯ ಮಾಡಿ



ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ.
- ಅವರಿಗೆ ಮಿಂಚುಪಟ್ಟಿಗಳನ್ನು ತೋರಿಸಿ ಪ್ರತಿಯೊಂದರ ಅರ್ಥದ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸುವುದು.
- ಪ್ರತಿ ಗುಂಪಿಗೂ ಒಂದು ವಿಷಯವನ್ನು ಆರಿಸಿಕೊಳ್ಳಲು ಅವಕಾಶ ನೀಡಿ ಮತ್ತು ಆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡಿ ಒಂದು ನಾಟಕ ತಯಾರಿಸಲು ಹೇಳಿ.
- ಇದಕ್ಕೆ 20 ನಿಮಿಷ ಕಾಲಾವಕಾಶ ನೀಡಿ
- ಪ್ರತಿ ಗುಂಪಿಗೆ ನಾಟಕ ಪ್ರದರ್ಶಿಸಲು 5 ನಿಮಿಷ ಕಾಲಾವಕಾಶ ನೀಡಿ, ಒಂದು ಗುಂಪು ನಾಟಕ ಪ್ರದರ್ಶನ ಮಾಡುವಾಗ ಇತರ ಗುಂಪುಗಳು ನಾಟಕ ವೀಕ್ಷಣೆ ಮಾಡುವಂತೆ ಸೂಚಿಸಿ.
- ಎಲ್ಲಾ ಗುಂಪಿನ ಪ್ರದರ್ಶನದ ನಂತರ ಪ್ರಶ್ನೆಗಳನ್ನು ಕೇಳಲು ಅವಕಾಶ ನೀಡುವುದು.

ಅರಿವು :

ತರಗತಿ 6–8 : **(60 ನಿಮಿಷಗಳು)**

ರಕ್ಷಣೆ ಎಂದರೇನು ?

'ಆಶಾವಾದಿ ಪ್ರತಿಯೊಂದು ಕಠಿಣತೆಯಲ್ಲಿ ಅವಕಾಶವನ್ನು ಹುಡುಕುತ್ತಾನೆ. ಆದರೆ ನಿರಾಶಾವಾದಿ ಪ್ರತಿಯೊಂದು ಅವಕಾಶದಲ್ಲಿ ಕಠಿಣತೆಯನ್ನು ಹುಡುಕುತ್ತಾನೆ. – ಸ್ವಾಮಿ ವಿವೇಕಾನಂದ'

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ. ಗುಂಪಿಗೆ "ರಕ್ಷಣೆ" ಎಂಬ ಪದವನ್ನು ಅವರುಗಳು ಎಲ್ಲೆಲ್ಲಿ ಕೇಳಿರುವರು ಎಂಬುದನ್ನು ಚರ್ಚಿಸಲು ಹೇಳಿ. ಉದಾಹರಣೆಗೆ: ಸೆಕ್ಯುರಿಟಿ ಗಾರ್ಡ್, ಸೆಕ್ಯುರಿಟಿ ಡಿಪಾಸಿಟ್, ಅರಣ್ಯ ಸಂರಕ್ಷಣಾ ಅಧಿಕಾರಿ ಇತ್ಯಾದಿ
- ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಪಟ್ಟಿ ಮಾಡಿ.
- ಪ್ರತಿ ಗುಂಪಿಗೆ "ದೈಹಿಕ ರಕ್ಷಣೆ, ಭಾವನಾತ್ಮಕ ರಕ್ಷಣೆ, ಮತ್ತು ಪರಿಸರದಲ್ಲಿ ರಕ್ಷಣೆ" ಎಂಬ ಮೂರು ಮಿಂಚುಪಟ್ಟಿಗಳನ್ನು ನೀಡಿ.
- ಪ್ರತಿ ಗುಂಪಿಗೆ ಅವರ ಪ್ರತಿಕ್ರಿಯೆಗಳನ್ನು ಕೊಟ್ಟಿರುವ ಮಿಂಚುಪಟ್ಟಿಯ ವಿಷಯಗಳಲ್ಲಿ ಯಾವ ವಿಷಯಕ್ಕೆ ಹೊಂದುವುದೆಂದು ಬರೆಯಲು ಹೇಳಿ.
- ಪ್ರತಿಯೊಂದು ವಿಷಯವನ್ನು ತೆಗೆದುಕೊಂಡು ಶಿಕ್ಷಕರ ಸಹಾಯದಿಂದ ವಿದ್ಯಾರ್ಥಿಗಳಿಗೆ ಚರ್ಚೆಯ ಮೂಲಕ ವಿವರಿಸಿ ಹೇಳಿ. ಕೆಳಗಿನಂತೆ ಪ್ರಶ್ನೆಗಳನ್ನು ಬಳಸಿ ಚರ್ಚೆ ನಡೆಸಿ.
  - ▲ "ದೈಹಿಕ, ಭಾವನಾತ್ಮಕ ಮತ್ತು ಪರಿಸರದಲ್ಲಿ ರಕ್ಷಣೆ" ಎಂದರೇನು?

☛ **ದೈಹಿಕ ರಕ್ಷಣೆ :** ಆರೋಗ್ಯಕರ ಆಹಾರ, ಉಡುಪು ಮತ್ತು ವಸತಿ ಇವುಗಳು ನಮಗೆ ಕಾಯಿಲೆಗಳಿಂದ ಹಾಗೂ ಮಳೆ, ಗಾಳಿ, ಬಿಸಿಲುಗಳಿಂದ ರಕ್ಷಣೆ ನೀಡುತ್ತವೆ. ಸಂರಕ್ಷಣಾ ನಿಯಮಗಳನ್ನು ಪಾಲಿಸುವುದರಿಂದ ದೈಹಿಕ ಹಲ್ಲೆ, ಹಿಂಸೆ, ನಿಂದನೆಗಳಿಂದ ರಕ್ಷಣೆ ಪಡೆಯಬಹುದು.

☛ **ಭಾವನಾತ್ಮಕ ರಕ್ಷಣೆ :** ಆತ್ಮೀಯತೆ, ಇನ್ನೊಬ್ಬರ ಪ್ರೀತಿಗೆ ಪಾತ್ರರಾಗಿರುವ ಭಾವನೆ, ಇತರರು ತನ್ನನ್ನು ಸ್ವೀಕರಿಸುವ ಭಾವನೆ, ಕುಟುಂಬ ಸದಸ್ಯರೊಂದಿಗೆ ಸ್ನೇಹಿತರೊಂದಿಗೆ ಮತ್ತು ಸಹಚರರೊಂದಿಗೆ ಆರೋಗ್ಯಕರ ಸಂಬಂಧ ಹೊಂದಿರುವುದು.

☛ **ಪರಿಸರದಲ್ಲಿ ರಕ್ಷಣೆ :** ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ, ಶುದ್ಧ ಗಾಳಿ, ನೀರು ಮತ್ತು ಆಹಾರದ ಪೂರೈಕೆಗೆ ಅವಕಾಶ, ಸುರಕ್ಷಿತ ಮತ್ತು ಸ್ವಚ್ಛ ವಾಸಸ್ಥಳ ಅವಶ್ಯಕತೆ.

▲ ಶಾಲೆಗಳು ಹೇಗೆ ಸುರಕ್ಷತೆಯನ್ನು ಒದಗಿಸಬಹುದು?

▲ ಅಂತರ್ಜಾಲದಿಂದ ರಕ್ಷಣೆ ಎಂದರೇನು? ಅಂತರ್ಜಾಲದಿಂದ ಸುರಕ್ಷಿತವಾಗಿರುವುದು ಮುಖ್ಯ ಎಂದು ನಿಮಗೆ ಅನಿಸುತ್ತದೆಯೇ?

▲ ಅಂತರ್ಜಾಲದ ಬಳಕೆ ಮಕ್ಕಳ ಭಾವನೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ಅನುಭವ :

ತರಗತಿ 6–8 :

ನಾವು ಏನು ಮಾಡಬೇಕು ?

(60 ನಿಮಿಷಗಳು)

ನಿಮ್ಮ ಶಾಲೆಗೆ ಹೊಸದಾಗಿ ಮಣಿಪುರದ ವಿದ್ಯಾರ್ಥಿ ದಾಖಲಾಗಿರುತ್ತಾನೆ, ಅದೇ ತರಗತಿಯ ಕೆಲವು ವಿದ್ಯಾರ್ಥಿಗಳು ಅವನನ್ನು "ಸಣ್ಣ ಕಣ್ಣಿನವ", "ಪರದೇಶಿ" ಎಂದು ಮೂದಲಿಸುತ್ತಿರುತ್ತಾರೆ.

ನಿಮ್ಮ ಸ್ನೇಹಿತೆ ಅಪರಿಚಿತ ವ್ಯಕ್ತಿಯೊಡನೆ ಫೋನಿನಲ್ಲಿ ಆಗಾಗ್ಗೆ ಮಾತನಾಡುತ್ತಿರುವುದಾಗಿ ಹೇಳುತ್ತಾಳೆ. ಇದುವರೆಗೂ ಅವರಿಬ್ಬರೂ ಮುಖಾಮುಖಿಯಾಗಿ ಭೇಟಿಯಾಗಿರುವುದಿಲ್ಲ. ಮುಂದಿನ ವಾರದಲ್ಲಿ ಅವಳು ಅಪರಿಚಿತ ವ್ಯಕ್ತಿಯನ್ನು ಭೇಟಿಯಾಗಲು ಅವನು ಹೇಳಿರುವ ಜಾಗಕ್ಕೆ ಒಬ್ಬಳೇ ಹೋಗಲು ನಿರ್ಧರಿಸಿರುತ್ತಾಳೆ.

ನಿಮ್ಮ ಕೆಲವು ಸ್ನೇಹಿತರು ಕೆಲವು ಶಿಕ್ಷಕರ ಕುರಿತು ಕುಚೇಷ್ಟೆ ಮಾಡಲು ಇಚ್ಛಿಸುತ್ತಾರೆ. ಶಿಕ್ಷಕರು ಒಂಟಿಯಾಗಿ ಅವರ ಕೊಠಡಿಯಲ್ಲಿದ್ದಾಗ ಗುಪ್ತವಾಗಿ ಪಟಾಕಿ ಹಚ್ಚುವ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಾರೆ.

ಮನೆಯಲ್ಲಿ ನೀವು ಮತ್ತು ನಿಮ್ಮ ಸ್ನೇಹಿತ ರಾಸಾಯನಿಕ ಪ್ರಯೋಗವನ್ನು ಮಾಡಲು ನಿರ್ಧರಿಸಿರುತ್ತೀರಿ. ಆಗ ಆಕಸ್ಮಿಕವಾಗಿ ನಿಮ್ಮ ಸ್ನೇಹಿತ ಕೈಸುಟ್ಟು ಕೊಳ್ಳುತ್ತಾನೆ. ಅವನು ನೋವಿನಿಂದ ನರಳುತ್ತಿರುತ್ತಾನೆ. ಈ ವಿಷಯ ಪೋಷಕರಿಗೆ ಗೊತ್ತಾದರೆ ಇಬ್ಬರಿಗೂ ಶಿಕ್ಷೆ ಯಾಗುವುದೆಂದು ನಿಮಗೆ ಭಯವಾಗುತ್ತದೆ.

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 3–4 ತಂಡಗಳಾಗಿ ವಿಂಗಡಿಸಿ.
- ಮೇಲೆ ನೀಡಿರುವ ಒಂದೊಂದು ವಿಷಯವನ್ನು ಒಂದೊಂದು ಗುಂಪಿಗೆ ನೀಡಿ ಚರ್ಚಿಸಲು ಹೇಳಿ.
- ಈ ಕೆಳಗಿನ ಪ್ರಶ್ನೆಗಳ ಮೂಲಕ ಚರ್ಚೆಯನ್ನು ಮಾಡಿ.
  - ▲ ಕೊಟ್ಟಿರುವ ಸನ್ನಿವೇಶಗಳಲ್ಲಿ ಯಾರಿಗಾದರೂ ಅಪಾಯವಿದೆಯೇ?
  - ▲ ಇಂತಹ ಸಂದರ್ಭದಲ್ಲಿ ಯಾವ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವಿರಿ?
  - ▲ ಈ ಸಂದರ್ಭವನ್ನು ನೀವೇ ನಿಭಾಯಿಸುವಿರಾ ಅಥವಾ ನಿಮಗೆ ಇತರರ ಸಹಾಯದ ಅವಶ್ಯಕತೆ ಇದೆ ಎಂದು ಅನಿಸುತ್ತದೆಯೇ? ಹೌದಾದರೆ, ಏಕೆ?
  - ▲ ಇಂತಹ ಸನ್ನಿವೇಶದಲ್ಲಿ ಜನರು ಏಕೆ ಸಿಕ್ಕಿ ಹಾಕಿಕೊಳ್ಳುವರು ಎಂದು ನಿಮಗೆ ಅನಿಸುತ್ತದೆ?
  - ▲ ಅಂತಹ ಸಂದರ್ಭಗಳನ್ನು ತಡೆಯಬಹುದೇ? ಹೌದಾದರೆ ಹೇಗೆ?
- ವಿದ್ಯಾರ್ಥಿಗಳು ತಾರ್ಕಿಕ ಪರಿಹಾರಗಳನ್ನು ನೀಡಲು ಪ್ರೋತ್ಸಾಹ ನೀಡಿ.
- ಯಾರಾದರೂ ತಮ್ಮ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳಬಯಸಿದರೆ ಅವರಿಗೆ ಅವಕಾಶ ನೀಡಿ.
- ಸಂದರ್ಭಾನುಸಾರ ನಿರ್ಣಯಗಳನ್ನು ತೆಗೆದುಕೊಳ್ಳುವುದರ ಪ್ರಾಮುಖ್ಯತೆಯನ್ನು ಮತ್ತು ತಮ್ಮ ಸುರಕ್ಷತೆಗೆ ಬೇಕಾದ ಮುಂಜಾಗ್ರತೆಯ ವಿಷಯಗಳ ಕುರಿತು ಚರ್ಚಿಸುತ್ತಾ ಸಾರಾಂಶೀಕರಿಸಿ.

ಅವಲೋಕನ :

ತರಗತಿ 6–8 : **ಸುರಕ್ಷತೆಯ ಜಾಗೃತಿ ಹರಡಿ** (60 ನಿಮಿಷಗಳು)



ಸಮುದಾಯದಲ್ಲಿ ಸುರಕ್ಷಿತವಾಗಿರುವುದು

ಶಾಲೆಯಲ್ಲಿ ಸುರಕ್ಷಿತವಾಗಿರುವುದು

ಮನೆಯಲ್ಲಿ ಸುರಕ್ಷಿತವಾಗಿರುವುದು

ನಿರೂಪಕ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

- ಸಮಾನ ಸಂಖ್ಯೆಯ ವಿದ್ಯಾರ್ಥಿಗಳಿರುವಂತೆ 3 ಗುಂಪುಗಳನ್ನು ರಚಿಸಿ.
- ಪ್ರತಿಯೊಂದು ಗುಂಪಿಗೂ ಮೇಲೆ ನೀಡಿರುವ ಒಂದು ವಿಷಯವನ್ನು ನೀಡಿ.
- ಅವರಿಗೆ ಪ್ರತಿ ವಿಷಯದಡಿ ಅನುಸರಿಸಬೇಕಾದ ಸುರಕ್ಷತಾ ಕ್ರಮ/ನಿಯಮಗಳನ್ನು ಪಟ್ಟಿ ಮಾಡಲು ತಿಳಿಸಿ.
- ಗುಂಪಿನಲ್ಲಿ ವಿದ್ಯಾರ್ಥಿಗಳು ಚರ್ಚಿಸಿ ಸಿದ್ಧಪಡಿಸುವ ಪ್ರತಿಯೊಂದು ನಿಯಮಗಳಿಗೆ ವರ್ಣರಂಜಿತ ಪೋಸ್ಟರ್‌ಗಳನ್ನು ರಚಿಸಲು ತಿಳಿಸಿ.
- ಎಲ್ಲಾ ಪೋಸ್ಟರ್‌ಗಳನ್ನು ತರಗತಿ/ಶಾಲಾ ಗೋಡೆಯ ಮೇಲೆ ಪ್ರದರ್ಶಿಸಲು ಅವಕಾಶ ಕಲ್ಪಿಸುವುದು.
- ಶಾಲೆಯ ಎಲ್ಲಾ ಮಕ್ಕಳು ಈ ಪೋಸ್ಟರ್‌ಗಳನ್ನು ವೀಕ್ಷಿಸಲು ಅವಕಾಶ ಕೊಡಿ.

ಪ್ರತಿಜ್ಞೆ

ನಾನು ಸುರಕ್ಷಿತವಾಗಿರಲು ಮತ್ತು ಸ್ನೇಹಿತರ ಹಾಗೂ ಸಮುದಾಯದ ಇತರೆ ಸದಸ್ಯರ ಹಿತಕ್ಕಾಗಿ ಕೆಳಕಂಡಂತೆ ಪ್ರತಿಜ್ಞೆ ಮಾಡುತ್ತೇನೆ :

- ಮನೆಯಲ್ಲಿ, ಶಾಲೆಯಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಚೂಪಾದ ಮತ್ತು ಇತರೆ ಹಾನಿಕಾರಕ ವಸ್ತುಗಳಿಂದ ದೂರವಿರುತ್ತೇನೆ.
- ಮನೆಯಲ್ಲಿ, ಶಾಲೆಯಲ್ಲಿ ಮತ್ತು ಇತರೆ ಎಲ್ಲಾ ಸ್ಥಳಗಳಲ್ಲಿಯೂ ಸುರಕ್ಷತಾ ನಿಯಮಗಳನ್ನು ಪಾಲಿಸುತ್ತೇನೆ.
- ಅಪಾಯದ ಸಂದರ್ಭಗಳು ಎದುರಾದಾಗ ಪರಿಸ್ಥಿತಿಯನ್ನು ಎದುರಿಸಲು ಪೋಷಕರ, ಶಿಕ್ಷಕರ ಹಾಗೂ ಇತರ ಹಿರಿಯರ ಗಮನಕ್ಕೆ ತಂದು ಮಾರ್ಗದರ್ಶನ ಪಡೆಯುತ್ತೇನೆ.
- ಅಪರಿಚಿತರಿಂದ ದೂರವಿರುತ್ತೇನೆ ಮತ್ತು ಯಾರಿಗೂ ದೈಹಿಕ ಅಥವಾ ಮಾನಸಿಕ ಹಿಂಸೆ ನೀಡುವುದಿಲ್ಲ.

ಸಲಹಾತ್ಮಕ ಚಟುವಟಿಕೆಗಳು :

1. ನಿಮ್ಮ ಶಾಲೆಯ ಮೈದಾನದಲ್ಲಿ ಆಡುವಾಗ ಆಗಬಹುದಾದ ಅಪಘಾತಗಳಾವುವು? ಅವುಗಳಿಗೆ ಹೇಗೆ ಚಿಕಿತ್ಸೆ ನೀಡಬೇಕು ಎಂಬುದನ್ನು ಚರ್ಚಿಸುವುದು.
2. ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶಿಸುವುದು.
3. ಅಗ್ನಿಶಾಮಕದಳದ ಸಿಬ್ಬಂದಿಯನ್ನು ಕರೆಸಿ ಅಗ್ನಿನಂದಕವನ್ನು ಉಪಯೋಗಿಸುವ ವಿಧಾನವನ್ನು ಮಕ್ಕಳಿಗೆ ತಿಳಿಸುವ ಪ್ರದರ್ಶನ ಏರ್ಪಡಿಸುವುದು.
4. ಅಪರಿಚಿತರೊಂದಿಗೆ ನಿಮ್ಮ ವರ್ತನೆ ಹೇಗಿರಬೇಕು ಮತ್ತು ಹೇಗಿರಬಾರದೆಂದು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ.
5. ನಿಮ್ಮ ಶಾಲಾ ಪ್ರವಾಸದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಚರ್ಚಿಸುವುದು.